ಇಲಾಖೆ	ಕೋಟಿ ರೂ.ಗಳಲ್ಲಿ ಖರ್ಚು (ನವೆಂಬರ್ 92ರ ಅಂತ್ಯದವರೆಗೆ)
1. ರಸ್ತೆ ಮತ್ತು ಸೇತುವೆ	23.51
2. ದೊಡ್ಡ ಮತ್ತು ಮಧ್ಯಮ ನೀರಾವರಿ	5.39
3. ಸಣ್ಣ ನೀರಾವರಿ	5.22
4. ಶಿಕ್ಷಣ	19.40
5. ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್	32.24
6. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ	17.94
7. ಆರೋಗ್ಯ	5.90
8. ಸಹಕಾರ	9.60
9. ಕರ್ನಾಟಕ ವಿದ್ಯುತ್ ಮಂಡಳಿ	8.94
10. ಯುವಜನ ಸೇವೆ	0.50
11. ಸಮಾಜ ಕಲ್ಯಾಣ	0.02
12. ಸಿಬ್ಬಂದಿ	0.09
ಒಟ್ಟು	**128.75**

ರಾಜಾಜಿನಗರ ಕ್ಷೇತ್ರದಲ್ಲಿ ವಿದ್ಯುತ್ ಲೋ ವೋಲ್ಟೇಜ್

14 - ಶ್ರೀ ಕೆ. ಲಕ್ಷ್ಮಣ್ (ರಾಜಾಜಿನಗರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜಾಜಿನಗರ ಕ್ಷೇತ್ರಕ್ಕೆ ಸೇರಿದ ಮಂಜುನಾಥನಗರ, ಇಂದಿರಾನಗರ, ಕೊಳಗೇರಿ, ಶ್ರೀ ಕಂಠೇಶ್ವರನಗರ ಹಾಗೂ ಮಹಾಲಕ್ಷ್ಮಿ ಬಡಾವಣೆಗಳಲ್ಲಿ ಲೋ ವೋಲ್ಟೇಜ್ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಲೋ ವೋಲ್ಟೇಜ್‌ನಿಂದ ಇಲ್ಲಿನ ನಿವಾಸಿಗಳಿಗೆ ಅನಾನುಕೂಲವಾಗಿರುವುದು ನಿಜವೆ?

ಇ) ಈ ಬಗ್ಗೆ ಕೆ.ಇ.ಬಿ.ಯವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) :

ಅ) ಹೌದು

ಆ) ಹೌದು

ಇ) ಮಂಜುನಾಥ್‌ನಗರ ಬಡಾವಣೆಯಲ್ಲಿ ಒಂದು ಹೆಚ್ಚುವರಿ 250 ಕೆ.ವಿ.ಎ. ಸಾಮರ್ಥ್ಯವುಳ್ಳ ಪರಿವರ್ತಕವನ್ನು ಹಾಕಲು ಮುಂಜೂರಾಗಿದ್ದು ಕೆಲಸವನ್ನು ಕೈಗೆತ್ತಿಕೊಳ್ಳಲಾಗಿದೆ. ಪರಿವರ್ತಕವನ್ನು ಅಳವಡಿಸಿದ ನಂತರ ಲೋ ವೋಲ್ಟೇಜ್ ತೊಂದರೆಯು ನಿವಾರಣೆಯಾಗುತ್ತದೆ.

ಆ) ಇಂದಿರಾನಗರ ಕೊಳಗೇರಿ ಬಡಾವಣೆಯಲ್ಲಿ ಈಗ ಹಾಲಿ ಇರುವ 2 ತಂತಿಗಳಿಗೆ ಬದಲಾಗಿ 4 ತಂತಿಗಳನ್ನು ಹಾಕಲು ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗಿದೆ. ಈ ಕೆಲಸವಾದ ನಂತರ ವೋಲ್ಟೇಜ್ ಉತ್ತಮಗೊಳ್ಳುತ್ತದೆ.

ಇ) ಮಹಾಲಕ್ಷ್ಮಿ ಬಡಾವಣೆಯಲ್ಲಿ ಒಂದು ಹೆಚ್ಚುವರಿ 250 ಕೆ.ವಿ.ಎ. ಸಾಮರ್ಥ್ಯವುಳ್ಳ ಪರಿವರ್ತಕವನ್ನು ಹಾಕಲು ಕೆಲಸ ಪ್ರಾರಂಭಿಸಿದ್ದು, ಪರಿವರ್ತಕವನ್ನು ಅಳವಡಿಸಿದ ನಂತರ ಲೋ ವೋಲ್ಟೇಜ್ ತೊಂದರೆಯು ನಿವಾರಣೆಯಾಗುತ್ತದೆ.

ಈ) ಶ್ರೀಕಂಠೇಶ್ವರ ನಗರದಲ್ಲಿ ಪರಿವರ್ತಕದಿಂದ ಅತ್ಯಂತ ದೂರವಿರುವ ಗ್ರಾಹಕರ ಸ್ಥಾವರಗಳಲ್ಲಿ ವೋಲ್ಟೇಜ್‌ನ್ನು ಅಳತೆ ಮಾಡಿ, ಅದು ಸರಿಯಿರುವುದರಿಂದ ಅಲ್ಲಿ ಲೋ ವೋಲ್ಟೇಜ್ ಸಮಸ್ಯೆ ಇಲ್ಲವೆಂದು ಕಂಡು ಬಂದಿರುತ್ತದೆ.

ನೌಕರಿ ಆಯ್ಕೆಯಲ್ಲಿ ಗ್ರಾಮಾಂತರ ಮಕ್ಕಳಿಗೆ 15 ಅಂಕಗಳ ಸೇರ್ಪಡೆ

224 ಸಿ - ಶ್ರೀ ಬಿ. ಶಿವರಾಮು (ಗಂಡಸಿ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯ ಸರ್ಕಾರಿ ನೌಕರಿ ಆಯ್ಕೆಯಲ್ಲಿ ಗ್ರಾಮಾಂತರ ಮಕ್ಕಳಿಗೆ ಪ್ರತಿಶತ 15 ಅಂಕಗಳ ಅಥವಾ 15 ಅಂಕಗಳನ್ನು ಸೇರಿಸಲಾಗುವುದೇ?

ಆ) ಅವುಗಳಲ್ಲಿ ಆರೋಗ್ಯ ಇಲಾಖೆಯಲ್ಲಿ ಸಂದರ್ಶನ ಕೊಡುವಾಗ ಯಾವ ರೀತಿ ಪರಿಗಣಿಸಿದೆ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಹೌದು.

ಗ್ರಾಮಾಂತರ ಅಭ್ಯರ್ಥಿಯು ಪಡೆದ ಒಟ್ಟು ಅಂಕಗಳಿಗೆ - 15 ಅಂಕಗಳನ್ನು ಸೇರಿಸಲಾಗುವುದು.

ಆ) ಸೇವಾ ನಿಯಮಾವಳಿಗಳ ಪ್ರಕಾರ ವಿದ್ಯಾರ್ಹತೆಗಳನ್ನು ಪರಿಗಣಿಸಿ ಒಟ್ಟು ಅಂಕಗಳಿಗೆ 15 ಅಂಕಗಳನ್ನು ಕೊಟ್ಟು ಶೇಖಡವಾರು ಮಾಡಿ ಸಂದರ್ಶನವನ್ನು ಕೊಡಲಾಗಿದೆ.

ತುಮಕೂರು ಜಿಲ್ಲೆಯಲ್ಲಿ ಸಾಕ್ಷರತಾ ಯೋಜನೆ

227 - ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತುಮಕೂರು ಜಿಲ್ಲೆಯಲ್ಲಿ ಸಾಕ್ಷರತಾ ಕಾರ್ಯಕ್ರಮದ ಅನುಷ್ಠಾನಕ್ಕೆ ಈವರೆಗೆ ಖರ್ಚು ಮಾಡಿರುವ ಹಣವೆಷ್ಟು?

ಆ) ಈ ದಿಸೆಯಲ್ಲಿ ಸಾಧಿಸಿರುವ ಪ್ರಗತಿಗಳೇನು?

ಇ) ಯಾವ ಯಾವ ಬಾಬಿಗೆ ಎಷ್ಟು ಹಣ ಖರ್ಚಾಗಿದೆ?

ಈ) ಇದರಲ್ಲಿ ಮುದ್ರಣಕ್ಕಾಗಿ ಖರ್ಚು ಮಾಡಿರುವ ಹಣವೆಷ್ಟು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) 1992 ನವೆಂಬರ್‌ವರೆಗೆ ಒಟ್ಟು ರೂ. 2,37,952.11 ವೆಚ್ಚವಾಗಿರುತ್ತದೆ.

ಆ) ರಾಷ್ಟ್ರೀಯ ಸಾಕ್ಷರತಾ ನಿಯೋಗದ ಮಾರ್ಗ ಸೂಚಿಯನ್ವಯ ದಿನಾಂಕ 24.7.91ರಂದು ತುಮಕೂರು ಜಿಲ್ಲೆಯ ಸಾಕ್ಷರತಾ ಆಂದೋಲನ ಯೋಜನೆಯ ರೂ. 2,57,51,150.00 ಗಳ ಪ್ರಸ್ತಾವನೆಗೆ ಕೇಂದ್ರ ಸರ್ಕಾರ ಅನುಮೋದನೆ ನೀಡಿತು. ಈ ದಿಸೆಯಿಂದಾಗಿ ಸಾಕ್ಷರ ಮಿತ್ರ ಎಂಬ ನೊಂದಾಯಿತ ಸಂಸ್ಥೆಯು ಅಸ್ತಿತ್ವಗೊಂಡು ಆಂದೋಲನವನ್ನು ಅನುಷ್ಠಾನಗೊಳಿಸುವ ಹೊಣೆ ಹೊತ್ತಿದೆ. ಈ